<u>ಚಾಸಾ-08 ಪ್ರಾಸಾ-06</u>

# ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ಕೂಡ್ಲಿಗಿ.

# ಸಿ ಸಿ - 47/2019

ದಿನಾಂಕಃ 14.10.2025 ರಂದು ಸಾಕ್ಷಿದಾರರಿಗೆ, ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

| | | |
|---|---|---|
| ಹೆಸರು | : | ಡಾ. ಮಧು.ಸಿ |
| ತಂದೆಯ ಹೆಸರು | : | ಜಿ. ಚಂದ್ರಶೇಖರ್ |
| ವಯಸ್ಸು | : | 50 ವರ್ಷ |
| ಉದ್ಯೋಗ | : | ವೈದ್ಯಾಧಿಕಾರಿಗಳು, ಕೂಡ್ಲಿಗಿ ಸರ್ಕಾರಿ ಆಸ್ಪತ್ರೆ |
| ವಾಸಸ್ಥಳ | : | ಬಳ್ಳಾರಿ |

## ಮುಖ್ಯ ವಿಚಾರಣೆ ಸ.ಸ.ಅ ರವರಿಂದಃ

ನಾನು 2003 ರಿಂದ ಇಲ್ಲಿಯವರೆಗೆ ಕೂಡ್ಲಿಗಿ ಸರ್ಕಾರಿ ಆಸ್ಪತ್ರೆಯಲ್ಲಿ ವೈದ್ಯಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿಃ 05.03.2014 ರಂದು ಸಂಜೆ 5-00 ಗಂಟೆಗೆ ಚಾ.ಸಾ 4 ರವರು ಲಾರಿಯಲ್ಲಿ ಕೆಲಸ ಮಾಡುವಾಗ ಬಿದ್ದಿರುವುದಾಗಿ ಹೇಳಿ ಚಿಕಿತ್ಸೆಗಾಗಿ ನಮ್ಮ ಆಸ್ಪತ್ರೆಗೆ ಬಂದಿದ್ದರು. ಅವರನ್ನು ಪರೀಕ್ಷಿಸಿದಾಗ ಈಗ ಕೆಳಕಂಡ ಗಾಯಗಳು ಕಂಡು ಬಂದಿರುತ್ತವೆ.

1. ಎಡ ಕಿವಿಯಲ್ಲಿ ರಕ್ತಸ್ರವ ಇರುವುದು ಕಂಡು ಬಂದಿರುತ್ತದೆ.
2. ಬೆನ್ನು ಭಾಗದಲ್ಲಿ ಊತ ಇರುವುದು ಕಂಡು ಬಂದಿರುತ್ತದೆ.
3. ಬೆನ್ನು ಮೂಳೆಯ D-11 and D-12 ಮೂಳೆ ಮುರಿದಿರುವುದು ಕಂಡು ಬಂದಿರುತ್ತದೆ.
4. ಸ್ಪೈನಲ್ ಕಾರ್ಡ್ ನಲ್ಲಿ D-10 ಭಾಗದಿಂದ D-12 ಭಾಗದವರೆಗೆ ಒತ್ತಿದ ಗಾಯವಾಗಿರುವುದು ಕಂಡು ಬಂದಿರುತ್ತದೆ.
5. D-11 and D-12 ಡಿಸ್ಕ್ ಸ್ಥಾನಪಲ್ಲಟವಾಗಿರುವುದು ಕಂಡು ಬಂದಿರುತ್ತದೆ.

ನನ್ನ ಅಭಿಪ್ರಾಯದ ಪ್ರಕಾರ ಈ ಮೇಲ್ಕಂಡ 1ನೇ ಗಾಯ ಸಾದಾ ಸ್ವರೂಪದ ಗಾಯವಾಗಿದ್ದು, 2 ರಿಂದ 5ನೇ ಗಾಯಗಳು ತೀವ್ರ ಸ್ವರೂಪದ ಗಾಯಗಳು ಆಗಿರುತ್ತವೆ. ಈ ಬಗ್ಗೆ ನಾನು ಗಾಯದ ಪ್ರಮಾಣ ಪತ್ರ ನೀಡಿರುತ್ತೇನೆ.

ಸದರಿ ಗಾಯದ ಪ್ರಮಾಣ ಪತ್ರವನ್ನು ಈಗಾಗಲೆ ನಿ.ಪಿ 6 ಎಂದು ಗುರುತಿಸಿದ್ದು, ಅದರಲ್ಲಿರುವ ನನ್ನ ಸಹಿಯನ್ನು ನಿ.ಪಿ 6-ಬಿ ಎಂದು ಗುರುತಿಸಲಾಯಿತು.

ಲಾರಿಯ ಮೇಲಿಂದ ಯಾವುದೇ ವ್ಯಕ್ತಿ ಕೆಳಗಡೆ ಬಿದ್ದರೆ ಈ ರೀತಿ ಗಾಯಗಳು ಆಗುತ್ತವೆ ಎಂದರೆ ಸರಿ.

**<u>ಪಾಟೀ ಸವಾಲು ಆರೋಪಿ ಪರ ವಕೀಲರಿಂದಃ</u>**

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ನಾನು ಪೊಲೀಸರಿಗೆ ಮಾಹಿತಿ ನೀಡಿದ್ದೇನೆ. ಈ ರೀತಿ ಗಾಯಗಳು ಯಾವುದೇ ವ್ಯಕ್ತಿ ಮರದ ಮೇಲಿನಿಂದ ಬಿದ್ದರೆ ಆಗುತ್ತವೆ ಎಂದರೆ ಸರಿ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

**ಓ,ಹೇ,ಕೇ,ಸರಿ ಇದೆ,**

**ಹಿ.ಸಿ.ಜೆ ಮತ್ತು ಜೆ.ಎಂ.ಎಫ್.ಸಿ**
**ಕೂಡ್ಲಿಗಿ.**